

## ಮರದ ಲಾರಿ

ಮಕ್ಕಳಿಗೆ ಬಾಲ್ಯದಲ್ಲಿ ಮಕ್ಕಳಾಟಿಕೆ ಕಂಡರೆ ಎಲ್ಲಿಲ್ಲದ ಖುಷಿ. ಪೇಟೆಯಲ್ಲಿ ತರ ತರಹದ ಮಕ್ಕಳಾಟಿಕೆಗಳು ಲಭ್ಯ. ಅವುಗಳಲ್ಲಿ ಬಹುತೇಕ ಪ್ಲಾಸ್ಟಿಕ್‌ನದ್ದಾಗಿರುತ್ತವೆ. ಆದರೆ, ಉತ್ತರಕನ್ನಡದ ಯಲ್ಲಾಪುರ ತಾಲ್ಲೂಕಿನ ಕೃಷಿಕರೊಬ್ಬರ ಮನೆಯಲ್ಲಿ ಈ ಚಿತ್ರದಲ್ಲಿನ ಮರದ ಆಟಿಕೆ (ಲಾರಿ) ಕಂಡಿತ್ತು. ಪ್ಲಾಸ್ಟಿಕ್ ಆಟಿಕೆಗಳನ್ನು ಮಕ್ಕಳು ಬಹುಬೇಗ ಹಾಳು ಮಾಡಿ ಮತ್ತೊಂದು ಆಟಿಕೆಗೆ ಹಟ ಮಾಡುತ್ತಾರೆ. ಹೀಗಾಗಿ, ಮರದ ಆಟಿಕೆ ತಂದುಕೊಟ್ಟರೆ ದೀರ್ಘಕಾಲದವರೆಗೆ ಬಾಳಿಕೆ ಬರುತ್ತದೆ. ಮನೆಯ ಪಿಠೋಪಕರಣಗಳನ್ನು ಮಾಡಲು ಬಂದ ಬಡಗಿಯೊಬ್ಬ, ಅನುಪಯುಕ್ತ ಕಟ್ಟಿಗೆಯನ್ನು ಬಳಸಿ ಇದನ್ನು ಲಾರಿ ಆಕಾರಕ್ಕೆ ತಂದಿದ್ದಾರೆ.

—ದತ್ತಾತ್ರೇಯ ಭಟ್ಟ, ಕಣ್ಣಿಪಾಲ

## ಸುರುಳಿ ಹೋಳಿಗೆ

ಉತ್ತರ ಕರ್ನಾಟಕದ ಹಲವು ಜಿಲ್ಲೆಗಳಲ್ಲಿ ಮೈದಾ ಹಿಟ್ಟು, ಸಿಹಿ ಸೂಸಲದಿಂದ ತಯಾರಿಸುವ ಸುರುಳಿ ಹೋಳಿಗೆಗೆ ಎಲ್ಲಿಲ್ಲದ ಮಹತ್ವ. ಬಲು ಖುಷಿಯಿಂದಲೇ ಈ ಹೋಳಿಗೆಯನ್ನು ಜನರು ಸವಿಯುತ್ತಾರೆ.

ಮದುವೆ ಮತ್ತು ಶುಭ ಸಮಾರಂಭಗಳಲ್ಲಿ ವಧುವಿನ ಉಡುಗೊರೆಗಳಲ್ಲಿ ಇದು ಕಡ್ಡಾಯ. ಎಣ್ಣೆ ಬಳಸದೆ ಇದನ್ನು ಹಂಚಿನಲ್ಲಿ ಸುಟ್ಟು ತಯಾರಿಸಲಾಗುತ್ತದೆ. ಆದರೆ ಈ ಹೋಳಿಗೆಯು ಈಚೆಗೆ ತೆರೆಗೆ ಸರಿದಿದೆ. ಶುದ್ಧ ಆರೋಗ್ಯಕರ ಸುರುಳಿ ಈ ಹೋಳಿಗೆಯ ಗತವೈಭವ ಮತ್ತೆ ಮರುಕಳಿಸುವುದೇ?

—ಪಲ್ಲವಿ ಡಿ. ಡೊಳ್ಳಿನ, ಧಾರವಾಡ





## ಕೂಗು ಬಸವಣ್ಣ

ಯಲ್ಲಾಪುರದಿಂದ ದೇಹಳ್ಳಿ ಗಣೇಶಗುಡಿ ಮಾರ್ಗವಾಗಿ ಉಳವಿಗೆ ಹೋಗುವ ದಾರಿಯ ಪಕ್ಕದಲ್ಲಿ ಅಲ್ಲಲ್ಲಿ ಕಲ್ಲಿನ ಬಸವಣ್ಣಗಳು ಕಾಣಸಿಗುತ್ತವೆ.

ಕಾಲ್ನಡಿಗೆಯಿಂದ ಉಳವಿಗೆ ಹೋಗುವ ಭಕ್ತರ ಅನುಕೂಲಕ್ಕೆಂದು ದಾರಿಯ ಗುರುತಿಗಾಗಿ ಕೂಗಳತೆಯಲ್ಲಿ ಈ ಕೂಗು ಬಸವಣ್ಣಗಳನ್ನು ಸ್ಥಾಪಿಸಲಾಗಿದೆ. ರಸ್ತೆ ಗುರುತಿಗಾಗಿಯೇ ಸೋದೆ ಅರಸರ ಕಾಲದಲ್ಲಿ ಇವುಗಳನ್ನು ನಿರ್ಮಾಣ ಮಾಡಲಾಗಿದೆ ಎಂಬ ಉಲ್ಲೇಖವೂ ಇತಿಹಾಸದಲ್ಲಿದೆ.

—ಶ್ರೀರಂಗ ವೆಂ.ಕಟ್ಟಿ, ಯಲ್ಲಾಪುರ.

## ನೀವೂ ಬರೆಯಿರಿ

ನೀವು ಕಂಡ ಅಚ್ಚರಿಯ ಸಂಗತಿ, ವಿಷಯ, ವಸ್ತುವಿನ ಕುರಿತು 100 ಶಬ್ದಗಳಲ್ಲಿ ಪುಟ್ಟ ಬರಹವನ್ನು ಬರೆದು ಕಳುಹಿಸಿ, ಜೊತೆಗೆ ಆ ಬರಹಕ್ಕೆ ಸಂಬಂಧಿಸಿದ ಚಿತ್ರವೂ ಇರಲೇಬೇಕು.

ವಿಳಾಸ:
**editorsu@sudha.co.in**

ಕಚೇರಿ ವಿಳಾಸ: ಸಂಪಾದಕರು, 'ಸುಧಾ' ವಾರಪತ್ರಿಕೆ, 75, ಮಹಾತ್ಮ ಗಾಂಧಿ ರಸ್ತೆ, ಬೆಂಗಳೂರು.ಪಿನ್‌ಕೋಡ್ 560001